ಅ. ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ ಮಾವಿನಹಳ್ಳಿ- ಬೋರಪ್ಪನ ಹಳ್ಳಿ ಮಾರ್ಗವಾಗಿ ಇಡಗೂರಿಗೆ ಹೋಗುವ ಲೋಕೋಪಯೋಗಿ ರಸ್ತೆಯು ಸಂಪರ್ಕ ರಸ್ತೆಯಾಗಿದ್ದು ಇಡಗೂರು ಗ್ರಾಮದ ಒಂದು ಕೆರೆ ಮಳೆ ಬಂದಾಗ ನೀರು ತುಂಬಿ ಗ್ರಾಮದ ರಸ್ತೆಯು ಜಲಾವೃತ್ತಗೊಂಡು ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಕೆರೆಯ ಕೋಡಿ ಹಳ್ಳಕ್ಕೆ ಅಡ್ಡಲಾಗಿ ಸದರಿ ರಸ್ತೆಯ ಮೇಲೆ ಸೇತುವೆ ನಿರ್ಮಾಣ ಮಾಡಲು ಸರ್ಕಾರವು ಕೈಗೊಳ್ಳುವ ಕ್ರಮವೇನು;

ಇ. ಈ ಸೇತುವೆಯನ್ನು ನಿರ್ಮಾಣ ಮಾಡಿ ಪೂರ್ಣಗೊಳ್ಳುವವರೆಗೆ ಹರಿಯುತ್ತಿರುವ ನೀರನ್ನು ಬಳಸಿಕೊಳ್ಳುವುದರ ಜೊತೆಗೆ ಸಂಚಾರಕ್ಕೆ ಅನುಕೂಲ ಮಾಡಿಕೊಡುವುದು ಯಾವಾಗ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ. ಗುಬ್ಬಿ ತಾಲ್ಲೂಕು, ಹೆಬ್ಬೂರು ಕಲ್ಲೂರು ರಸ್ತೆಯಿಂದ ಮಾವಿನಹಳ್ಳಿ ಬೋರಪ್ಪನಹಳ್ಳಿ, ಇಡಗೂರು, ಅಡಿಕೆಕೆರೆ ಮಾರ್ಗವಾಗಿ ಕುಣಿಗಲ್ ಗಡಿಗೆ ಸಂಪರ್ಕ ಕಲ್ಪಿಸುವ ರಸ್ತೆಯು ಲೋಕೋಪಯೋಗಿ ರಸ್ತೆಯಲ್ಲ. ಇದು ಹಳ್ಳಿ ರಸ್ತೆಯಾಗಿರುತ್ತದೆ. ಈ ರಸ್ತೆಕಾಮಗಾರಿಯನ್ನು ನಬಾರ್ಡ್ ಆರ್.ಐ.ಡಿ.ಎಫ್-6 ನಬಾರ್ಡ್ ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿದೆ. ಈ ರಸ್ತೆಯ 4ನೇ ಕಿಮೀನಲ್ಲಿ ಇಡಗೂರು ಕೆರೆ ಕೋಡಿ ನೀರು ರಸ್ತೆಯ ಮೇಲೆ ಹರಿದು ಹೋಗುತ್ತಿದ್ದು ಇಲ್ಲಿ ಸೇತುವೆ ನಿರ್ಮಾಣದ ಅವಶ್ಯಕತೆ ಇದೆ.

ಆ. ಈ ಸೇತುವೆ ಕಾಮಗಾರಿಗೆ ನಬಾರ್ಡ್ ಯೋಜನೆಯಡಿ ಸಚಿವ ಸಂಪುಟ ಉಪಸಮಿತಿ ಹಾಗೂ ನಬಾರ್ಡ್ ನಿಂದ ಅನುಮೋದನೆ ದೊರೆತಲ್ಲಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಇ. ಮೇಲೆ ತಿಳಿಸಿರುವಂತೆ ಅನುಮೋದನೆ ದೊರೆತನಂತರ ಕ್ರಮ ಕೈಕೊಳ್ಳಲು ಸಾಧ್ಯವಾಗುವುದು.

958 (1520) - ಶ್ರೀ ವೀರಣ್ಣಗೌಡ ಎಸ್. (ಗುಬ್ಬಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಅಕ್ರಮ ಭೂಮಿಯನ್ನು ಹೊಂದಿರುವ ಬಡ ರೈತಾಪಿ ವರ್ಗದವರು ಈಗಾಗಲೇ ಹಲವಾರು ವರ್ಷಗಳಿಂದ ಸಾಗುವಳಿ ಮಾಡುತ್ತಾ ಬಂದಿದ್ದು, ಇದೂವರೆವಿಗೂ ಸಕ್ರಮ ಮಾಡಿಕೊಳ್ಳಲು ಸರ್ಕಾರವು ಅರ್ಜಿಗಳನ್ನು ಆಹ್ವಾನಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ. ಹಾಗಿದ್ದಲ್ಲಿ, ಅಕ್ರಮ ಜಮೀನುಗಳನ್ನು ಸಕ್ರಮಗೊಳಿಸಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಿ ಪ್ರಕಟಣೆ ಹೊರಡಿಸುವುದು ಯಾವಾಗ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ. 1964ರ ಕರ್ನಾಟಕ ಭೂ ಕಂದಾಯ ಅಧಿನಿಯಮದ ಕಲಂ 94ಎ ಮತ್ತು 94ಬಿರ ಅನ್ವಯ 14-4-1990ರ ದಿನಾಂಕಕ್ಕಿಂತ ಹಿಂದಿನಿಂದ ಸರ್ಕಾರಿ ಜಮೀನನ್ನು ಅಕ್ರಮ ಸಾಗುವಳಿ ಮಾಡಿಕೊಂಡು ಬರುತ್ತಿರುವವರು ಸ್ವಂತ ಹಿಡುವಳಿ ಸೇರಿದಂತೆ, 5 ಎಕರೆ ಮಿತಿಗೊಳಪಟ್ಟು, ಜಮೀನನ್ನು ಸಕ್ರಮಗೊಳಿಸಿಕೊಳ್ಳಲು ಅನಧಿಕೃತ ಸಾಗುವಳಿದಾರರು ಬಗರ್ ಹುಕುಂ ಸಮಿತಿಗೆ ಅರ್ಜಿಸಲ್ಲಿಸಿಕೊಳ್ಳಲು ದಿನಾಂಕ:14-9-1991ರ ವರೆಗೆ ಹಾಗೂ 30-4-1999ರ ವರೆಗೆ ಎರಡು ಬಾರಿ ಅವಕಾಶ ಮಾಡಿಕೊಡಲಾಗಿತ್ತು.

ಆ. ಉದ್ಭವಿಸುವುದಿಲ್ಲ.